ಪುರಾಣಗಳ ಜಗನ್ಮಾತೆಗೆ ಹಲವು ಬಾಹುಗಳು. ನಮ್ಮ ಶಾಲಾ ಶಿಕ್ಷಕಿಯರೇನೂ ಕಡಿಮೆಯಿಲ್ಲ. ಇರುವ ಎರಡು ಕೈಗಳಲ್ಲೇ ಅನೇಕ ಕೆಲಸಗಳನ್ನು ನಿಭಾಯಿಸುವ ಶಕ್ತಿಸಂಪನ್ನೆಯರು. ಒಂದೆಡೆ ಶಾಲಾಮಕ್ಕಳಿಗೆ ಪಾಠ, ಇನ್ನೊಂದೆಡೆ ಕುಟುಂಬದ ನಿರ್ವಹಣೆಯ ಹೊಣೆಗಾರಿಕೆ. ಇವುಗಳ ಜೊತೆಗೆ ಜನಗಣತಿ, ಮಕ್ಕಳ ಗಣತಿ, ಚುನಾವಣೆ, ಬಿಸಿಯೂಟ, ಹತ್ತಾರು ತರಬೇತಿ ಕಮ್ಮಟ – ಹೀಗೆ ಹೆಸರಿಸಿದಷ್ಟೂ ಮುಗಿಯದ ಕೆಲಸಗಳಿಗೆ ಹೆಗಲು ಕೊಡಬೇಕಾದ ಅನಿವಾರ್ಯತೆ ಅವರದು. ಅತ್ಯಂತ ಗುರುತರವೂ ಕಠಿಣವೂ ಆದ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ 'ಶಿಕ್ಷಕಿ'ಯರು ನಿಜ ಅರ್ಥದಲ್ಲಿ ಶಕ್ತಿರೂಪಿಣಿಯರು. ಅಂಥ ‘ಭಾರೀ ಒಳ್ಳೆ’ ಟೀಚರಮ್ಮಗಳ ಅನುದಿನದ ತವಕ ತಲ್ಲಣಗಳ ಅವಲೋಕನ ಈ ವಾರದ ಮುಖಪುಟ ಕಥನ.

ಇದು ‘ಶಿಕ್ಷಕರ ದಿನಾಚರಣೆ’ ಸಂದರ್ಭದಲ್ಲಿ ಸುಧಾ ವಿಶೇಷ.

# ಶಕ್ತಿರೂಪಿಣಿ ಶಿಕ್ಷಕಿಯರಿಗೆ ನಮಸ್ಕಾರ

■ ಸುಮಾ ಬಿ.

ಚಿತ್ರಗಳು: ತಾಜುದ್ದೀನ್ ಆಜಾದ್

